# ಅಕ್ಟೋಬರ್ 2021 ರ ಮಾಹೆಯ ಪರ್ಯಾಯ ಶೈಕ್ಷಣಿಕ ಯೋಜನೆ

ತರಗತಿ:–6 ವಿಷಯ:– ವಿಜ್ಞಾನ

| ಕ್ರ ಸಂ | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ಅಕ್ಟೋಬರ್ ಮೊದಲನೇ ವಾರ<br><br>ಅಧ್ಯಾಯ– ನಮ್ಮ ಸುತ್ತಲಿನ ಬದಲಾವಣೆಗಳು | 1.ನಮ್ಮ ಸುತ್ತಲಿನ ವಿವಿಧರೀತಿಯ ಬದಲಾವಣೆಗಳನ್ನು ಪಟ್ಟಿ ಮಾಡಿ. ಅವುಗಳಲ್ಲಿ ಪರಾವರ್ತಗೊಳಿಸ ಬಹುದಾದ ಹಾಗೂ ಪರಾವರ್ತಗೊಳಿಸ ಲಾಗದ ಬದಲಾವಣೆಗಳನ್ನು ವ್ಯತ್ಯಾಸಿಸುವರು. | 1, ವಿದ್ಯಾರ್ಥಿಗಳಿಗೆ ತಮ್ಮ ಸುತ್ತಲಿನ ಪರಿಸರದಲ್ಲಿ ನಡೆಯುವ ಬದಲಾವಣೆಗಳಾದ ಹೂಗಳು ಅರಳುವುದು, ಗಿಡಗಳು ಬೆಳೆಯುವುದು, ನೀರು ಮಂಜುಗಡ್ಡೆ ಅಗುವುದು, ಕೂದಲುಗಳು ಬೆಳೆಯುವುದು, ಮೇಣದ ಬತ್ತಿ ಉರಿಯುವುದು, ಹಾಲು ಮೊಸರಾಗುವುದು,ಕಾಯಿಗಳು ಹಣ್ಣಾಗುವುದು ಇನ್ನಿತರೆ ಬದಲಾವಣೆಗಳನ್ನು ಗಮನಿಸಲು ಸೂಚಿಸುವುದು.<br><br>2.ವಿದ್ಯಾರ್ಥಿಗಳಿಗೆ ಬಣ್ಣದ ಹಾಳೆಗಳನ್ನು ನೀಡಿ ಮಡಿಚುವಿಕೆಯ ಮೂಲಕ ಹಾಗೂ ಕತ್ತರಿಸುವಿಕೆಯ ಮೂಲಕ ಪ್ರತ್ಯೇಕವಾಗಿ ವಿವಿಧ ಆಕೃತಿ/ಆಟಿಕೆಗಳನ್ನು ತಯಾರಿಸಲು ಸೂಚಿಸುವುದು. (ಪೇಪರ್ ಕ್ರಾಫ್ಟ್‌ಗಳನ್ನು ತಯಾರಿಸಲು ಈ ಕೆಳಗಿನ ಯೂಟ್ಯೂಬ್ ಲಿಂಕನ್ನು ಬಳಸಿಕೊಳ್ಳುವುದು<br>https://www.youtu.be/2hcLNOXCF0)<br><br>https://www.youtu.be/gh2yrPYm1j8<br>ಇ –ಸಂವೇದ ತರಗತಿಯ ವಿಡಿಯೋ ಲಿಂಕ್‌ಅನ್ನು ಬಳಸಿಕೊಂಡು ನಮ್ಮ ಸುತ್ತಲಿನ ಬದಲಾವಣೆಗಳು ಪಾಠವನ್ನು ವೀಕ್ಷಿಸಲು ತಿಳಿಸುವುದು. | 1.ತಮ್ಮ ಸುತ್ತಲಿನ ಪರಿಸರದಲ್ಲಿ ಗಮನಿಸಿದ ವಿವಿಧರೀತಿಯ ಬದಲಾವಣೆಗಳನ್ನು ಪಟ್ಟಿ ಮಾಡಿ.<br><br>2.ಬದಲಾವಣೆಯ ನಂತರವೂ ಅದೇ ವಸ್ತುವನ್ನು ಪಡೆಯಬಹುದಾದ ಆಕೃತಿ/ಆಟಿಕೆಗಳಾವುವು?<br><br>3.ಬದಲಾವಣೆಯ ನಂತರಅದೇ ವಸ್ತುವನ್ನು ಪಡೆಯಲಾಗದ ಆಕೃತಿ/ಆಟಿಕೆಗಳಾವುವು? |

| | | | | |
|---|---|---|---|---|
| | | <u>2.ಬದಲಾವಣೆಗಳಲ್ಲಿ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳನ್ನು ಗುರ್ತಿಸುವರು.</u> | 3. ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಬದಲಾವಣೆಗಳನ್ನೊಳಗೊಂಡ ಚಟುವಟಿಕೆ ಹಾಳೆ–01ನ್ನು ನೀಡಿ ಪರಾವರ್ತಗೊಳಿಸಬಹುದಾದ ಹಾಗೂ ಪರಾವರ್ತಗೊಳಿಸಲಾಗದ ಬದಲಾವಣೆಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಲು ಸೂಚಿಸುವುದು.ಹಾಗೂ<br>ಚಟುವಟಿಕೆ ಹಾಳೆ–02 ರಲ್ಲಿನ ಬದಲಾವಣೆಗಳನ್ನು ಚಿತ್ರದ ಕೆಳಗೆ ಬರೆಯಲು ತಿಳಿಸುವುದು.<br><br>4. ವಿದ್ಯಾರ್ಥಿಗಳಿಗೆ ಬಲೂನ್‌ನ್ನು ಊದಲು, ರಬ್ಬರ್‌ಬ್ಯಾಂಡ್ ಹಾಗೂ ಕ್ಯಾಟರ್ ಬಿಲ್‌ಗಳನ್ನು ಎಳೆದು ಬಿಡಲು ಸೂಚಿಸಿ, ಅವುಗಳ ಆಕಾರ, ಗಾತ್ರಗಳಲ್ಲಿ ಆದ ಬದಲಾವಣೆಗಳನ್ನು ಗಮನಿಸಲು ತಿಳಿಸುವುದು. ಚಟುವಟಿಕೆ ಹಾಳೆ–03 ನ್ನು ಭರ್ತಿ ಮಾಡಲು ಶಿಕ್ಷಕರ/ಹಿರಿಯರ ಸಹಾಯವನ್ನು ಬಳಸಿಕೊಳ್ಳುವುದು.<br>DIKSHA ದೀಕ್ಷಾಆಪ್ ನಲ್ಲಿ ನಮ್ಮ ಸುತ್ತಲಿನ ಬದಲಾವಣೆಗಳು ಪಠ್ಯಾಂಶಕ್ಕೆ ಸಂಬಂಧಿಸಿದ ವಿಡಿಯೋಗಳನ್ನು ನೋಡಿ ಮಾಹಿತಿಯನ್ನು ತಿಳಿಯಲು ಸಹಕರಿಸೋಣ. | 4. ಪರಾವರ್ತಗೊಳಿಸಬಹುದಾದ ಹಾಗೂ ಪರಾವರ್ತಗೊಳಿಸಲಾಗದ ಬದಲಾವಣೆಗಳಿಗೆ ವ್ಯತ್ಯಾಸಗಳನ್ನು ತಿಳಿಸಿ.<br><br>5. ಅಭ್ಯಾಸ ಪುಸ್ತಕದಲ್ಲಿನ ಪುಟ ಸಂಖ್ಯೆ 40 ರಲ್ಲಿನ ವೈಜ್ಞಾನಿಕ ಕಾರಣಗಳನ್ನು ಬರೆಯುವುದು. |

| | | | | |
|---|---|---|---|---|
| 02 | ಎರಡನೇ ವಾರ<br><br>ಅಧ್ಯಾಯ– ಸಸ್ಯಗಳನ್ನು ತಿಳಿಯುವುದು | **1.ಸಸ್ಯದ ವಿವಿಧ ಭಾಗಗಳು ಹಾಗೂ** ಸಸ್ಯಗಳ ಎತ್ತರ, ಕಾಂಡ, ಮತ್ತು ರೆಂಬೆಗಳ ಆಧಾರದ ಮೇಲೆ ಗಿಡಮೂಲಿಕೆ,ಪೊದೆ ,ಮರಗಳಾಗಿ ವರ್ಗೀಕರಿಸಿ ಅರ್ಥೈಸುವುದು. | 1.ನೈಜ ಸಸ್ಯವನ್ನು ಬಳಸಿಕೊಂಡು ಸಸ್ಯದ ವಿವಿಧ ಭಾಗಗಳನ್ನು ಪರಿಚಯಿಸುವರು.<br>ಚಟುವಟಿಕೆ ಹಾಳೆ–04ನ್ನು ಶಿಕ್ಷಕರ/ಸಹಪಾಠಿಗಳ/ಹಿರಿಯರ ಸಹಾಯದಿಂದ ನಿರ್ವಹಿಸುವುದು.<br>ಮಕ್ಕಳಿಗೆ ವಿವಿಧರೀತಿಯ ಸಸ್ಯಗಳ ಚಿತ್ರಗಳನ್ನು ಸಂಗ್ರಹಿಸಲು ತಿಳಿಸಿ, ಸಸ್ಯಗಳ ಎತ್ತರ, ಕಾಂಡ, ಮತ್ತು ರೆಂಬೆಗಳ ಆಧಾರದ ಮೇಲೆ ಅವುಗಳ ಹೋಲಿಕೆ,ವ್ಯತ್ಯಾಸಗಳನ್ನು ಗಮನಿಸಿ,ಗಿಡಮೂಲಿಕೆ,ಪೊದೆ,ಮರ,ನೆಲಬಳ್ಳಿ ಮತ್ತು ಅಡರುಬಳ್ಳಿಗಳಾಗಿ ವರ್ಗೀಕರಿಸಲು ಸಹಕರಿಸುವುದು.<br>ಚಟುವಟಿಕೆ ಹಾಳೆ –05ನ್ನು ಶಿಕ್ಷಕರ/ಸಹಪಾಠಿಗಳ ಸಹಾಯದಿಂದ ನಿರ್ವಹಿಸುವುದು.<br>https://youtu.be/lp-34UXRiDOಇ –ಸಂವೇದತರಗತಿಯ ವಿಡಿಯೋ ಲಿಂಕ್‌ಅನ್ನು ಬಳಸಿಕೊಂಡು “ಸಸ್ಯಗಳನ್ನು ತಿಳಿಯುವುದು” ಪಾಠವನ್ನು ವೀಕ್ಷಿಸಿ ಅದರಲ್ಲಿನ ಚಟುವಟಿಕೆಗಳನ್ನು ಮಾಡಲು ಸಹಕರಿಸೋಣ. | 1.ಅಭ್ಯಾಸ ಪುಸ್ತಕದಲ್ಲಿನ ಪುಟ ಸಂಖ್ಯೆ 44ರ Q III ರಲ್ಲಿನಹೊಂದಿಸಿ ಬರೆಯಿರಿ ಮತ್ತುQ1Vರಲ್ಲಿನಪ್ರಶ್ನೆಗಳಿಗೆ ಉತ್ತರಿಸುವುದು.<br><br>2.ನೀವು ದಿನ ನಿತ್ಯ ಬಳಸುವ ಆಹಾರ ಪದಾರ್ಥಗಳ ಸಸ್ಯಗಳನ್ನು ಪಟ್ಟಿ ಮಾಡಿ.ಅವುಗಳನ್ನು ಸಸ್ಯದ ವಿವಿಧ ವರ್ಗಗಳಾಗಿ ವರ್ಗೀಕರಿಸಿ. |
| | ಮೂರನೇ ವಾರ | 2. ಸಸ್ಯದ ಭಾಗಗಳಾದ ಕಾಂಡ,ಬೇರಿನ ಕಾರ್ಯಗಳು ಹಾಗೂ ಎಲೆ,ಹೂವಿನ ವಿನ್ಯಾಸ ಮತ್ತು ಕಾರ್ಯಗಳನ್ನು ತಿಳಿಯುವರು. | 1,ಪಠ್ಯ ಪುಸ್ತಕದಲ್ಲಿನ ಪುಟ ಸಂಖ್ಯೆ 79 ರಲ್ಲಿನ ಚಟುವಟಿಕೆ2ನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ನಿರ್ವಹಿಸುವುದು.<br>https://youtu.be/hSnk4warAu8 ಈ ವಿಡಿಯೋ ಲಿಂಕ್‌ಅನ್ನು ವೀಕ್ಷಿಸುವುದು.<br><br>2. ಪಠ್ಯ ಪುಸ್ತಕದಲ್ಲಿನ ಪುಟ ಸಂಖ್ಯೆ 84 ರಲ್ಲಿನಚಟುವಟಿಕೆ 6,7,9ನ್ನು ಶಿಕ್ಷಕರ/ಹಿರಿಯರ/ಸಹಪಾಠಿಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ನಿರ್ವಹಿಸುವುದು.<br>ಚಟುವಟಿಕೆ ಹಾಳೆ–06ನ್ನು ಶಿಕ್ಷಕರ/ಸಹಪಾಠಿಗಳ ಸಹಾಯದಿಂದ ನಿರ್ವಹಿಸುವುದು. | 3.ಕಾಂಡದ ಕಾರ್ಯಗಳನ್ನು ಬರೆಯಿರಿ?<br><br>4. ತಾಯಿ ಬೇರು ಹಾಗೂ ತಂತು ಬೇರುಗಳನ್ನು ಹೊಂದಿರುವ ಸಸ್ಯಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ. |

| | | | | |
|---|---|---|---|---|
| | | | 3. ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಎಲೆಗಳನ್ನು ಸಂಗ್ರಹಿಸಿ ತರಲು ತಿಳಿಸಿ, ಎಲೆಗಳ ಹಸ್ತಾಕ್ಷರವನ್ನು ಹಾಳೆಯಲ್ಲಿ ಮೂಡಿಸಿ,ಎಲೆಯ ಸಿರಾ ವಿನ್ಯಾಸವನ್ನು ಹಾಗೂ ಕಾರ್ಯಗಳನ್ನು ಅರ್ಥೈಸಿಕೊಳ್ಳಲು ಶಿಕ್ಷಕರು ಸಹಕರಿಸುವುದು.<br>ಪಠ್ಯ ಪುಸ್ತಕದಲ್ಲಿನ ಪುಟ ಸಂಖ್ಯೆ 82 ರಲ್ಲಿನಚಟುವಟಿಕೆ 4 ಮತ್ತು 5ನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.<br>ಚಟುವಟಿಕೆ ಹಾಳೆ –07ನ್ನು ಶಿಕ್ಷಕರ/ಸಹಪಾಠಿಗಳ ಸಹಾಯದಿಂದ ನಿರ್ವಹಿಸುವುದು.<br>https://youtu.be/QdXQ7r8sq_C<br><br>ಈ ವಿಡಿಯೋ ಲಿಂಕ್‌ಅನ್ನು ವೀಕ್ಷಿಸುವುದು.<br>4.ನೈಜ ದಾಸವಾಳ ಹೂವನ್ನು ಸಂಗ್ರಹಿಸಿ ಹೂವಿನ ವಿವಿಧ ಭಾಗಗಳನ್ನು ಪರಿಚಯಿಸಿ ಅರ್ಥೈಸುವುದು.<br>ಚಟುವಟಿಕೆ ಹಾಳೆ–08 ಮತ್ತು 09ನ್ನು ನಿರ್ವಹಿಸುವುದು.<br>ಹೆಚ್ಚಿನ ಕಲಿಕೆಗಾಗಿ<br>https://youtu.be/-7DbXaJW-7Yಈ ವಿಡಿಯೋ ಲಿಂಕ್‌ಅನ್ನು ವೀಕ್ಷಿಸುವುದು.<br>https://youtu.be/V07anc8u1oಈ ವಿಡಿಯೋ ಲಿಂಕ್‌ಅನ್ನು ವೀಕ್ಷಿಸುವುದು. | 5.ಎಲೆಯಅಂದವಾದಚಿತ್ರಬರೆದು ಭಾಗಗಳನ್ನು ಗುರ್ತಿಸಿ ಭಾಷ್ಪ ವಿಸರ್ಜನೆಕ್ರಿಯೆಯನ್ನು ವಿವರಿಸಿ.<br><br>6. ದ್ಯುತಿ ಸಂಶ್ಲೇಷಣೆ ಪ್ರಕ್ರಿಯೆಯನ್ನು ವಿವರಿಸಿ.<br><br>7. ದಾಸವಾಳ ಹೂವಿನ ಅಂದವಾದಚಿತ್ರ ಬರೆದು ಬಣ್ಣ ಹಚ್ಚಿ ಭಾಗಗಳನ್ನು ಗುರ್ತಿಸಿ.<br><br>8.ಅಭ್ಯಾಸ ಪುಸ್ತಕದ ಪುಟ ಸಂಖ್ಯೆ 45,46,47 ಗಳನ್ನು ಪೂರ್ಣಗೊಳಿಸಲು ತಿಳಿಸುವುದು. |

**ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021**

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 01

ಕೆಳಗಿನವುಗಳನ್ನು ಪರಾವರ್ತಗೊಳಿಸಬಹುದಾದ ಮತ್ತು ಪರಾವರ್ತಗೊಳಿಸಲಾಗದ ಬದಲಾವಣೆಗಳನ್ನಾಗಿ ಪಟ್ಟಿ ಮಾಡಿ.

1.ಕರ್ಪೂರ ಉರಿಯುವುದು.

2.ಹಾಲು ಮೊಸರಾಗುವುದು.

3. ಕಾಯಿ ಹಣ್ಣಾಗುವುದು.

4.ಪೇಪರ್ ಮುದುಡುವುದು.

5.ಸುಕ್ಕಾದ ಬಟ್ಟೆ ಇಸ್ತ್ರಿ ಮಾಡುವುದು.

6. ಬೀಜ ಮೊಳಕೆಯೊಡೆಯುವುದು.

7.ಸೇಬು ಹಣ್ಣಿನಿಂದಜ್ಯೂಸ್‌ತಯಾರಿಸುವುದು.

8.ಮಂಜುಗಡ್ಡೆ ನೀರಾಗುವುದು.

9.ನೀರು ಆವಿಯಾಗಿ ಬದಲಾಗುವುದು.

10.ಸಕ್ಕರೆಯಿಂದ ಸಕ್ಕರೆ ಪಾಕ ತಯಾರಿಸಲಾಗಿದೆ.

| **ಪರಾವರ್ತಗೊಳಿಸಬಹುದಾದ ಬದಲಾವಣೆಗಳು** | **ಪರಾವರ್ತಗೊಳಿಸಲಾಗದ ಬದಲಾವಣೆಗಳು** |
|---|---|
| | |
| | |
| | |
| | |
| | |
| | |

| | |
|---|---|
| | |
| | |
| | |

**<u>ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021</u>**

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 02

ಕೆಳಗಿನ ಚಿತ್ರಗಳನ್ನು ಗಮನಿಸಿ ಪರಾವರ್ತಗೊಳಿಸಬಹುದಾದ ಮತ್ತು ಪರಾವರ್ತಗೊಳಿಸಲಾಗದ ಬದಲಾವಣೆಗಳನ್ನು ಖಾಲಿ ಜಾಗದಲ್ಲಿ ಬರೆಯಿರಿ.



**ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021**

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 03

ಕೆಳಗಿನವುಗಳಲ್ಲಿ ಹಿಗ್ಗುವ ಮತ್ತು ಕುಗ್ಗುವ ವಸ್ತುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ಬರೆಯಿರಿ.

1. ಎಳೆದ ರಬ್ಬರ್ ಬ್ಯಾಂಡ್
2. ಗಾಳಿ ತುಂಬಿ ಹೊಡೆದ ಬಲೂನ್
3. ಕಾಯ್ದ ಕಬ್ಬಿಣ
4. ಪಂಕ್ಚರ್ ಆದ ಟೈರ್
5. ನೀರಿನಲ್ಲಿ ಅದ್ದಿದ ಹತ್ತಿ
6. ಕಾದ ಎಣ್ಣೆಯಲ್ಲಿ ಹಾಕಿದ ಹಪ್ಪಳ

| ಹಿಗ್ಗುವ ವಸ್ತುಗಳು | ಕುಗ್ಗುವ ವಸ್ತುಗಳು |
|---|---|
| | |

**<u>ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021</u>**

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 04

ಕೆಳಗಿನಚಿತ್ರವನ್ನು ಗಮನಿಸಿ ಸಸ್ಯದ ಭಾಗಗಳನ್ನು ಗುರುತಿಸಿ.



**<u>ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021</u>**

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 05

ಕೆಳಗಿನ ಚಿತ್ರಗಳನ್ನು ಗಮನಿಸಿ ಇವು ಯಾವ ಸಸ್ಯ ವರ್ಗಗಳ ಗುಂಪಿಗೆ ಸೇರಿವೆ ಎಂಬುದನ್ನು ಬರೆಯಿರಿ.











## ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 06

ಕೆಳಗಿನ ಚಿತ್ರಗಳನ್ನು ಗಮನಿಸಿ ಬೇರಿನ ಕಾರ್ಯಗಳನ್ನು ಬರೆಯಿರಿ.









**<u>ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021</u>**

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 07

ಕೆಳಗೆ ನೀಡಿರುವ ಚಿತ್ರಗಳಲ್ಲಿಎಲೆಯ ಭಾಗಗಳನ್ನು ಗುರ್ತಿಸಿ ಹಾಗೂ ಇವು ಯಾವ ರೀತಿಯ ಎಲೆಯಸಿರಾ ವಿನ್ಯಾಸವನ್ನು ಹೊಂದಿವೆ ಎಂಬುದನ್ನು ಬರೆಯಿರಿ.





---

**<u>ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021</u>**

**ತರಗತಿ: 6ನೇ** **ವಿಷಯ:ವಿಜ್ಞಾನ**

ಚಟುವಟಿಕೆ ಹಾಳೆ– 08

ಕೆಳಗೆ ನೀಡಿರುವ ಹೂವಿನ ಚಿತ್ರದ ಭಾಗಗಳನ್ನು ಗುರ್ತಿಸಿ.



**ಪರ್ಯಾಯ ಶೈಕ್ಷಣಿಕ ಯೋಜನೆ ಅಕ್ಟೋಬರ್– 2021**

**ತರಗತಿ: 6ನೇ** **ವಿಷಯ :ವಿಜ್ಞಾನ**

ಚಟುವಟಿಕೆ ಹಾಳೆ–09

ವಿವಿಧ ರೀತಿಯ ಹೂಗಳನ್ನು ಸಂಗ್ರಹಿಸಿ, ವೀಕ್ಷಿಸಿ ಕೆಳಗಿನ ಕೋಷ್ಟಕವನ್ನು ಭರ್ತಿ ಮಾಡಿ.

| ಹೂವಿನ ಹೆಸರು | ಪುಷ್ಪ ಪತ್ರಗಳ ಸಂಖ್ಯೆ ಮತ್ತು ಬಣ್ಣ | ಪುಷ್ಪ ದಳಗಳ ಸಂಖ್ಯೆ ಮತ್ತು ಬಣ್ಣ | ಪುಷ್ಪ ಪತ್ರಗಳು ಒಟ್ಟಿಗೆ ಸೇರಿವೆಯೇ? ಅಥವಾ ಪ್ರತ್ಯೇಕವಾಗಿವೆಯೇ? | ಪುಷ್ಪ ದಳಗಳು ಅಂಟಿಕೊಂಡಿವೆಯೇ? ಅಥವಾ ಪ್ರತ್ಯೇಕವಾಗಿವೆಯೇ? | ಶಲಾಕೆ ಇದೆ ಅಥವಾ ಇಲ್ಲ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |